# <u>ಕರ್ನಾಟಕ ವಿಧಾನ ಪರಿಷತ್ತು.</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 349 (347)

ಸದಸ್ಯರ ಹೆಸರು : ಶ್ರೀ ಸಿ. ಟಿ. ರವಿ

(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

ಉತ್ತರಿಸುವ ದಿನಾಂಕ : 10.12.20205

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯಾದ್ಯಂತ ಪೌತಿ ಖಾತೆಗಾಗಿ ಬಾಕಿ ಇರುವ ಅರ್ಜಿಗಳೆಷ್ಟು; ಕಳೆದ 2 ವರ್ಷದಿಂದ ಎಷ್ಟು ಅರ್ಜಿಗಳು ಇತ್ಯರ್ಥಗೊಂಡಿವೆ; ಎಷ್ಟು ಅರ್ಜಿಗಳು ಬಾಕಿ ಇವೆ; (ಜಿಲ್ಲಾವಾರು ವಿವರ ನೀಡುವುದು) | ಆಧಾರ್ ಸೀಡಿಂಗ್ ಅಭಿಯಾನದಡಿ ಪಹಣಿಗಳಿಗೆ ಆಧಾರ್ ಜೋಡಣೆ ಕಾರ್ಯ ಮಾಡುವಾಗ ಮೃತ ಖಾತೆದಾರ ಎಂದು ಒಟ್ಟು 50,23,308 ಪಹಣಿಗಳನ್ನು ಗುರುತಿಸಲಾಗಿರುತ್ತದೆ. ಇವುಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ಒಟ್ಟು 5,69,744 ವಹಿವಾಟುಗಳನ್ನು ಭೂಮಿ ಕಿಯೋಸ್ಕ್ ಮೂಲಕ ವಿಲೇವಾರಿ ಮಾಡಲಾಗಿರುತ್ತದೆ. ಜೂನ್ 2025 ರಿಂದ ಒಟ್ಟು 2,41,622 ವಹಿವಾಟುಗಳನ್ನು ಇ-ಪೌತಿ ತಂತ್ರಾಂಶದ ಮೂಲಕ ವಿಲೇವಾರಿ ಮಾಡಲಾಗಿರುತ್ತದೆ. ಪ್ರಸ್ತುತ 42,11,942 ಪಹಣಿಗಳು ಪೌತಿ ಖಾತೆ ಮಾಡಲು ಬಾಕಿ ಇರುತ್ತವೆ.<br><br>ಜಿಲ್ಲಾವಾರು ವಿವರಗಳನ್ನು **<u>ಅನುಬಂಧ</u>**ದಲ್ಲಿ ನೀಡಲಾಗಿದೆ. |
| (ಆ) | ಪೌತಿ ಖಾತೆ ಆಂದೋಲನ ನಿಧಾನಗತಿಯಲ್ಲಿ ಸಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಾಕಿ ಇರುವ ಅರ್ಜಿಗಳನ್ನು ತ್ವರಿತಗತಿಯಲ್ಲಿ ಇತ್ಯರ್ಥಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಯಾವ ಕಾಲಮಿತಿಯೊಳಗೆ ಬಾಕಿ ಇರುವ ಅರ್ಜಿಗಳನ್ನು ಇತ್ಯರ್ಥಪಡಿಸಲಾಗುವುದು; | ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 33 ಟಿಆರ್‌ಎಂ 2019(ಇ), ದಿನಾಂಕ: 17.10.2020 ಮತ್ತು ತಿದ್ದುಪಡಿ ಸುತ್ತೋಲೆ ಸಂಖ್ಯೆ: ಕಂಇ 33 ಟಿಆರ್‌ಎಂ 2019 (ಇ), ದಿನಾಂಕ: 10.01.2024ರಂತೆ ಪೌತಿ/ವಾರಸಾ ಖಾತೆ ಆಂದೋಲನವನ್ನು ನಡೆಸಲು ಸರ್ಕಾರದಿಂದ ಸುತ್ತೋಲೆಗಳನ್ನು ಹೊರಡಿಸಲಾಗಿದ್ದು, ಪೌತಿ ಖಾತೆಗಾಗಿ ಅರ್ಜಿಗಳನ್ನು ಸ್ವೀಕರಿಸಲು ಭೂಮಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ ಹಾಗೂ ಪೌತಿ ಖಾತೆಗೆ ಅರ್ಜಿ ಸ್ವೀಕರಿಸಲು ಬೇಕಾದ ದಾಖಲೆಗಳನ್ನು ಸಹ ಸರಳೀಕರಣಗೊಳಿಸಲಾಗಿದೆ.<br><br>ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಕಂಇ 95 ಎಂಆರ್‌ಆರ್ 2025, ದಿನಾಂಕ: 21.04.2025ರಂತೆ ಮರಣ ಹೊಂದಿದ ಖಾತೆದಾರರ ವಾರಸುದಾರರ ಹೆಸರಿಗೆ ಖಾತಾ ಪಹಣಿ ಇಂದೀಕರಣ ಮಾಡುವ ನಿಟ್ಟಿನಲ್ಲಿ ಕಂದಾಯ ಇಲಾಖೆಯ ಮೂಲಕ ಇ-ಪೌತಿ ತಂತ್ರಾಂಶವನ್ನು ನೀಡಲಾಗಿರುತ್ತದೆ. ಸದರಿ ತಂತ್ರಾಂಶದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು |

| | | |
|---|---|---|
| | | ಮರಣ ಹೊಂದಿದ ವಾರಸುದಾರರ e-KYC ಪಡೆಯುವ ಮುಖಾಂತರ ವಂಶವೃಕ್ಷ, ಮರಣ ಪ್ರಮಾಣ ಪತ್ರ & ಇತರೆ ದಾಖಲೆಗಳನ್ನು ಪಡೆದು ಪೌತಿ ಖಾತೆ ಮಾಡಲು ಕ್ರಮವಹಿಸಲಾಗುತ್ತಿದೆ. |
| (ಇ) | ಪೌತಿ ಖಾತೆ ಅರ್ಜಿಗಳನ್ನು ಸ್ವೀಕರಿಸುವಾಗ ಯಾವ ಯಾವ ದಾಖಲೆಗಳನ್ನು ಪಡೆಯಲಾಗುತ್ತಿದೆ; ದಾಖಲೆಗಳನ್ನು ಸರಳೀಕರಣಗೊಳಿಸುವ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ ; | ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 33 ಟಿಆರ್ಎಂ 2019(ಇ) ದಿನಾಂಕ: 17.10.2020 ಮತ್ತು ತಿದ್ದುಪಡಿ ಸುತ್ತೋಲೆ ಸಂಖ್ಯೆ: ಕಂಇ 33 ಟಿಆರ್ಎಂ 2019(ಇ) ದಿನಾಂಕ: 10.01.2024ರಂತೆ ಪೌತಿ ಖಾತೆಗೆ ಈ ಕೆಳಗಿನ ದಾಖಲೆಗಳು ಅವಶ್ಯಕವಾಗಿರುತ್ತದೆ.<br><br>1. ಮರಣ ಪ್ರಮಾಣ ಪತ್ರ/ಅಫಿಡವಿಟ್<br>2. ವಂಶವೃಕ್ಷ |
| (ಈ) | ಸರ್ಕಾರದ ಸೂಚನೆಯಂತೆ ಪೌತಿ ಖಾತೆಗೆ ಅರ್ಜಿ ಸಲ್ಲಿಸಿದ ಎಷ್ಟು ದಿನಗಳ ಒಳಗೆ ಪೌತಿ ಖಾತೆ ಮಾಡಿಕೊಡಬೇಕು; ಎಲ್ಲಾ ದಾಖಲೆಗಳು ಸರಿ ಇದ್ದರೂ ಸಕಾಲದಲ್ಲಿ ಪೌತಿ ಖಾತೆ ಮಾಡಿಕೊಡದ ಅಧಿಕಾರಿಗಳ ವಿರುದ್ಧ ಸರ್ಕಾರ ಏನು ಕ್ರಮ ಕೈಗೊಂಡಿದೆ? | ಕರ್ನಾಟಕ ಭೂ ಕಂದಾಯ ಅಧಿನಿಯಮ ಮತ್ತು ನಿಯಮಗಳನ್ವಯ ಪೌತಿ ಖಾತೆಗೆ ಒಟ್ಟು 15 ದಿನಗಳ ನೋಟೀಸು ಅವಧಿ ಇರುತ್ತದೆ. ಅದರಂತೆ ರಾಜ್ಯದಲ್ಲಿ 15 ದಿನಗಳ ನೋಟೀಸ್ ಅವಧಿ ಸೇರಿ ಸರಾಸರಿ 17 ದಿನಗಳಲ್ಲಿ ಪೌತಿ ಖಾತೆ ಬದಲಾವಣೆ ಆಗುತ್ತದೆ. ಪೌತಿ ಮ್ಯುಟೇಷನ್‌ಗೆ ತಕರಾರು ಸ್ವೀಕೃತವಾದಲ್ಲಿ ಸದರಿ ವಹಿವಾಟನ್ನು ಆರ್.ಸಿ.ಸಿ.ಎಂ.ಎಸ್ ತಂತ್ರಾಂಶಕ್ಕೆ ವರ್ಗಾಯಿಸಲಾಗುತ್ತದೆ ಹಾಗೂ ಕಾಯ್ದೆಯ ಕಲಂ 129(4)ರಂತೆ ಇತ್ಯರ್ಥಪಡಿಸಲು ಅವಕಾಶವಿರುತ್ತದೆ. ಎಲ್ಲಾ ದಾಖಲೆಗಳು ಸರಿ ಇದ್ದರೂ ಸಹ ಸಕಾಲದಲ್ಲಿ ಪೌತಿ ಖಾತೆ ಮಾಡಿಕೊಡದ ಅಧಿಕಾರಿಗಳ ವಿರುದ್ಧ ದೂರುಗಳಿದ್ದಲ್ಲಿ ಕರ್ನಾಟಕ ಸಕಾಲ ಸೇವೆಗಳ ಕಾಯ್ದೆ, 2011ರಂತೆ ಕ್ರಮವಹಿಸಲು ಅವಕಾಶವಿರುತ್ತದೆ. |

**ಸಂ: ಕಂಇ 187 ಟಿಆರ್ಎಂ 2025 (1990008)**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 347 ಕ್ಕೆ ಅನುಬಂಧ.

## ಅನುಬಂಧ

| Sl No | District | Total RTCs marked as deceased during Aadhar seeding | Total pauthi Transactions Disposed through Bhoomi Kiosk | Total pauthi Transactions Disposed through e-pouthi | Total pauthi Transactions Disposed | Total Survey Number pending for pouthi mutations |
|---|---|---|---|---|---|---|
| 1 | Bagalkot | 56443 | 15540 | 3946 | 19486 | 36957 |
| 2 | BALLARI | 57217 | 9768 | 6639 | 16407 | 40810 |
| 3 | BELAGAVI | 472927 | 55539 | 11449 | 66988 | 40810 |
| 4 | BENGALURU RURAL | 80318 | 13298 | 5720 | 19018 | 405939 |
| 5 | Bengaluru South | 179208 | 14285 | 6011 | 20296 | 61300 |
| 6 | BENGALURU URBAN | 27551 | 5615 | 337 | 5952 | 158912 |
| 7 | Bidar | 58787 | 12751 | 8215 | 20966 | 21599 |
| 8 | Chamarajanagara | 123507 | 9958 | 3474 | 13432 | 37821 |
| 9 | Chikballapur | 257179 | 13183 | 5348 | 18531 | 110075 |
| 10 | CHIKKAMAGALURU | 99196 | 13722 | 10291 | 24013 | 238648 |
| 11 | Chitradurga | 201363 | 18936 | 9445 | 28381 | 75183 |
| 12 | Dakshina Kannada | 99163 | 17274 | 2871 | 20145 | 172982 |
| 13 | Davanagere | 82763 | 14536 | 5889 | 20425 | 79018 |
| 14 | Dharwad | 57003 | 16457 | 6761 | 23218 | 62338 |
| 15 | Gadag | 52399 | 11836 | 4693 | 16529 | 33785 |
| 16 | Hassan | 267010 | 24192 | 10351 | 34543 | 35870 |
| 17 | Haveri | 97722 | 16493 | 6010 | 22503 | 232467 |
| 18 | KALABURAGI | 82894 | 21031 | 9193 | 30224 | 75219 |
| 19 | Kodagu | 270807 | 6924 | 1789 | 8713 | 52670 |
| 20 | Kolar | 282868 | 17325 | 8789 | 26114 | 262094 |
| 21 | koppal | 72215 | 13328 | 7766 | 21094 | 256754 |
| 22 | Mandya | 390649 | 35927 | 25105 | 61032 | 51121 |
| 23 | MYSURU | 195182 | 22123 | 10865 | 32988 | 329617 |
| 24 | Raichur | 79473 | 20139 | 7174 | 27313 | 162194 |
| 25 | SHIVAMOGGA | 87476 | 14437 | 10302 | 24739 | 52160 |
| 26 | TUMAKURU | 578051 | 56294 | 25717 | 82011 | 62737 |
| 27 | Udupi | 296054 | 17825 | 4951 | 22776 | 496040 |
| 28 | Uttar Kannada | 187396 | 17265 | 8186 | 25451 | 273278 |
| 29 | Vijayanagara | 125828 | 12050 | 6540 | 18590 | 161945 |
| 30 | VIJAYAPURA | 33030 | 18333 | 3418 | 21751 | 107238 |
| 31 | Yadgir | 71629 | 13360 | 4377 | 17737 | 11279 |
| | | | | | | 53892 |
| **Total** | | **5023308** | **569744** | **241622** | **811366** | **4211942** |